ಪ್ರಧಾನ ಸಿವಿಲ್ ಮತ್ತು ಜೆಎಮ್‌ಎಫ್ ಸಿ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ.

ಸಿಸಿ ನಂ.**562/2025**

ಪಿರ್ಯಾದಿ : ಶ್ರೀ ಸಾಬಣ್ಣ ತಂದೆ ರಾಮಪ್ಪ,
ವಃ 40 ವರ್ಷ, ಉಃ ಒಕ್ಕಲುತನ,
ಸಾಃ ಹುಲಕಲ್ ಗ್ರಾಮ, ತಾಃ ವಾಡಗೇರಾ, ಜಿಃ ಯಾದಗಿರಿ.

ಆರೋಪಿ : ಶ್ರೀ ಹನಮಿರೆಡ್ಡಿ ತಂದೆ ಬಸನಗೌಡ ಬಿರಾದರ್,
ವಃ 50 ವರ್ಷ, ಸಾಃ ಚಿತ್ತಾಪುರ ರೋಡ್, ಸ್ಟೇಷನ್ ಏರಿಯಾ,
ಯಾದಗಿರಿ.

ದಂಡ ಪ್ರಕ್ರಿಯಾ ಸಂಹಿತೆ ಕಲಂ **313** ರ ಅಡಿಯಲ್ಲಿ ಆರೋಪಿತನ ಹೇಳಿಕೆ

ಪ್ರಶ್ನೆಃ**1**ಃ ನೀವು ದೂರುದಾರರ ವಿಚಾರಣೆಯನ್ನು ಕೇಳಿದ್ದೀರಾ**?**

ಆರೋಪಿಯ ಉತ್ತರಃ

ಪ್ರಶ್ನೆ2 : ಪ್ರಾಸಾ-1 ಶ್ರೀ ಸಾಬಣ್ಣ ತಂದೆ ರಾಮಪ್ಪ ದೂರುದಾರರಾಗಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ಆರೋಪಿಯಾದ ನೀವು ದೂರುದಾರರಿಂದ ರೂ.7,00,000/-ಗಳನ್ನು ಸಾಲಪಡೆದು ದಿನಾಂಕ 23.01.2024 ರ ಒಳಗಾಗಿ ಮರುಪಾವತಿ ಮಾಡುವುದಾಗಿ ಒಪ್ಪಿಕೊಂಡು ದೂರುದಾರರಿಗೆ ನಿಮ್ಮ ಖಾತೆಯ 114205 ಸಂಖ್ಯೆಯ ಚೆಕನ್ನು ನೀಡಿರುತ್ತೀರಿ ಎಂದು ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುವಿರಿ?

ಆರೋಪಿಯ ಉತ್ತರಃ

ಪ್ರಶ್ನೆಃ 3 ಃ ಪ್ರಾಸಾ 1 ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಮುಂದುವರೆದು, ದಿನಾಂಕ 23.01.2024 ರಂದು ದೂರುದಾರರು ಸದರಿ ಚೆಕ್‌ನ್ನು ನಗದೀಕರಣಕ್ಕಾಗಿ ತಾವು ಖಾತೆ ಹೊಂದಿರುವ ಹೆಚ್.ಡಿ.ಎಫ್.ಸಿ ಬ್ಯಾಂಕ್, ಯಾದಗಿರಿ ಶಾಖೆಯ ಮೂಲಕ ಹಾಜರು ಪಡಿಸಿದಾಗ, "12 Drawers signature differs" ಎಂಬ ಹಿಂಬರಹದೊಂದಿಗೆ ಅಮಾನ್ಯಗೊಂಡು ಚೆಕ್ಕನ್ನು ದಿನಾಂಕ 24.01.2024 ರಂದು ವಾಪಸ್ಸು ನೀಡಿರುತ್ತಾರೆ ಎಂದು ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುವಿರಿ?

ಆರೋಪಿಯ ಉತ್ತರಃ

ಪ್ರಶ್ನೆ 4ಃ ಪ್ರಾಸಾ 1 ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಮುಂದುವರೆದು, ನಂತರ ಪಿರ್ಯಾದುದಾರರು ತಮ್ಮ ವಕೀಲರ ಮೂಲಕ ದಿನಾಂಕ 02.02.2024 ರಂದು ಅಪಾದಿತನಾದ ನಿಮ್ಮ ವಿಳಾಸಕ್ಕೆ ನೊಂದಾಯಿತ ಅಂಚೆಯ ಮೂಲಕ ತಿಳುವಳಿಕೆ ಪತ್ರವನ್ನು ಕಳುಹಿಸಿದ್ದು, ಸದರಿ ನೋಟಿಸ್ ನಿಮಗೆ ಜಾರಿಯಾಗಿರುತ್ತದೆ. ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲದಿದ್ದರು ದೂರುದಾರರಿಗೆ ಚೆಕ್‌ನ್ನು ನೀಡಿ ನಂತರ ಚೆಕ್ ಮೊತ್ತವನ್ನು ಪಾವತಿ ಮಾಡದೆ ಇರುವುದರ ಮೂಲಕ ವರ್ಗಾವಣೀಯ ಲಿಖಿತ ಕಾಯ್ದೆ ಕಲಂ 138 ರಡಿ ಅಪರಾಧ ಎಸಗಿದ್ದೀರಿ ಎಂದು ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುವಿರಿ?

ಆರೋಪಿಯ ಉತ್ತರಃ

ಪ್ರಶ್ನೆ **5**ಃ ಈ ಪ್ರಕರಣದ ಬಗ್ಗೆ ನೀವು ಏನಾದರೂ ಹೇಳಲು ಇಚ್ಛಿಸುತ್ತೀರಾ?

ಆರೋಪಿಯ ಉತ್ತರಃ

ಪ್ರಶ್ನೆ **6** ಃ ನಿಮ್ಮ ಪರ ಯವುದಾದರೂ ಸಾಕ್ಷಿಯನ್ನು ವಿಚಾರಣೆ ಮಾಡುತ್ತೀರಾ?

ಆರೋಪಿಯ ಉತ್ತರಃ

(ಮೇಲ್ಕಂಡಂತೆ ಆಪಾದಿತರಿಗೆ ತಿಳಿದ ಭಾಷ್ಯೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಪ್ರಶ್ನಿಸಿ, ಅವರು ನೀಡಿದ ಹೇಳಿಕೆಯನ್ನು ಪಡೆದುಕೊಳ್ಳಲಾಯಿತು.)

ದಿನಾಂಕಃ 26.09.2025
ಸ್ಥಳಃ ಯಾದಗಿರಿ

ಪ್ರಧಾನ ಸಿವಿಲ್ ಮತ್ತು ಜೆ ಎಂ ಎಫ ಸಿ
ನ್ಯಾಯಾಧೀಶರು,ಯಾದಗಿರಿ.